Receipt No : 120270/2022/INU-MSW
File No. INU-MSW0SCSP/2/2022-MSW (Computer No. 15944 )

Ph. No: 26700460, Telefax : 26706777

# INSTITUTE OF NEPHRO UROLOGY

(Government of Karnataka – Autonomous Institute – Regd. No. 1052/03-04)
(A Post Graduate Institute of Higher Medical Sciences,
Affiliated to Rajiv Gandhi University of Health Sciences, Bangalore.
Recognised by Medical Council of India)
Victoria Hospital Campus, Bangalore – 560 002.
Email :nephrourology.institute@gmail.com
Website: www.nephrourology.in

ಸಂಖ್ಯೆ : ನೆಯುಸಂ/ಎಸ್‌ಸಿಎಸ್‌ಪಿ – ಟಿಎಸ್‌ಪಿ/01 /2021-22 ದಿನಾಂಕ: 18.03.2022

## ಸುತ್ತೋಲೆ

ವಿಷಯ : 2022-23 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೋಗಿಗಳ ಚಿಕಿತ್ಸೆಗೆ ಸಹಾಯಧನ ನೀಡುವುದರ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೋಗಿಗಳು 2022-23 ನೇ ಸಾಲಿನಲ್ಲಿ ಎಸ್‌ಸಿಎಸ್‌ಪಿ (ಪರಿಶಿಷ್ಟ ಜಾತಿ-ಉಪಯೋಜನೆ) ಮತ್ತು ಟಿಎಸ್‌ಪಿ (ಪರಿಶಿಷ್ಟ ಪಂಗಡದ (ಗಿರಿಜನ)-ಉಪಯೋಜನೆ) ಉಪಯೋಜನೆಗಳಡಿಯಲ್ಲಿ ದಿನಾಂಕ: 01.04.2022 ರಿಂದ 31.03.2023 ರವರೆಗೆ ಅಥವಾ ಮುಂದಿನ ಆದೇಶದವರೆಗೆ ಚಿಕಿತ್ಸೆಗಾಗಿ ಆರ್ಥಿಕ ಸಹಾಯವನ್ನು ಈ ಸಂಸ್ಥೆಯಲ್ಲಿ ಪಡೆಯಬಹುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೋಗಿಗಳು ಈ ಕೆಳಗೆ ತಿಳಿಸಿರುವ ಪ್ರಮಾಣ ಪತ್ರಗಳೊಂದಿಗೆ ಸಂಸ್ಥೆಯ ಕೊಠಡಿ ಸಂಖ್ಯೆ 18 ರಲ್ಲಿ ವೈದ್ಯಕೀಯ ಸಾಮಾಜಿಕ ಕಾರ್ಯಕರ್ತರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಆರ್ಥಿಕ ಸಹಾಯದ ಸೌಲಭ್ಯವನ್ನು ಪಡೆಯಬಹುದು.

ಎ) ರೋಗಿಯ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೂಲ ಜಾತಿ ಪ್ರಮಾಣ ಪತ್ರ ಹಾಗೂ ಒಂದು ಜೆರಾಕ್ಸ್ ಪ್ರತಿ (ಜಾತಿ ಪ್ರಮಾಣ ಪತ್ರವು ಸರ್ಕಾರ ನಿರ್ದಿಷ್ಟಪಡಿಸಿರುವಂತೆ RD ಸಂಖ್ಯೆಯಿಂದಲೇ ಪಡೆದಿರಬೇಕು ಹಾಗೂ ಸದರಿ ಪ್ರಮಾಣ ಪತ್ರವು ಆನ್ ಲೈನ್ ನಲ್ಲಿ ಗೋಚರಿಸುವಂತಿರಬೇಕು).

ಬಿ) ರೋಗಿಯ ಚಾಲ್ತಿಯಲ್ಲಿರುವ ವಾರ್ಷಿಕ ಆದಾಯ ಪ್ರಮಾಣ ಪತ್ರ (ಆದಾಯ ಪ್ರಮಾಣ ಪತ್ರವು ಸರ್ಕಾರ ನಿರ್ದಿಷ್ಟಪಡಿಸಿರುವಂತೆ RD ಸಂಖ್ಯೆಯಿಂದಲೇ ಪಡೆದಿರಬೇಕು ಹಾಗೂ ಸದರಿ ಪ್ರಮಾಣ ಪತ್ರವು ಆನ್ ಲೈನ್ ನಲ್ಲಿ ಗೋಚರಿಸುವಂತಿರಬೇಕು).

ಸಿ) ರೋಗಿಯ ಆಧಾರ ಚೀಟಿ

ಡಿ) ರೋಗಿಯ ಕುಟುಂಬ ಪಡಿತರ ಚೀಟಿ

ಇ) ರೋಗಿಯ ಇತ್ತೀಚಿನ ಎರಡು ಪಾಸ್ ಪೋರ್ಟ್ ಅಳತೆಯ ಭಾವಚಿತ್ರ.

ಸೂಚನೆ: ಯಾವುದೇ ಕಾರಣಕ್ಕೂ ಮೇಲ್ಕಾಣಿಸಿದ ಪ್ರಮಾಣಪತ್ರಗಳು ಹಾಗೂ ದಾಖಲೆ ಇಲ್ಲದಿದ್ದ ಪಕ್ಷದಲ್ಲಿ ರೋಗಿಗಳು ಈ ಸೌಲಭ್ಯಕ್ಕೆ ಅರ್ಹರಾಗಿರುವುದಿಲ್ಲ.

ನಿರ್ದೇಶಕರು,
ನೆಫ್ರೋ-ಯುರಾಲಜಿ ಸಂಸ್ಥೆ,
ಬೆಂಗಳೂರು.

ಪ್ರತಿ:

1. ಸ್ವಾಗತಕಾರರ ವಿಭಾಗ, ನೆ.ಯು.ಸಂ. ಬೆಂಗಳೂರು.
2. ಹೊರ ರೋಗಿ ವಿಭಾಗ, ನೆ.ಯು.ಸಂ. ಬೆಂಗಳೂರು.
3. ಸೂಚನಾ ಫಲಕ.
4. ವೆಬ್ ಸೈಟ್ ಪ್ರತಿ.

Generated from eOffice by SUDHAKAR, MEDICAL SOCIAL WORKER